	ಸಂಪರ್ಕಿಸುವ ರಸ್ತೆ.	::	195.80
78)	ರಾಜ್ಯ ಹೆದ್ದಾರಿ 95 ರಾಜ್ಯ ಹೆದ್ದಾರಿ ಖಾನಾಪುರವನ್ನು ಸದಾಶಿವಗಡಕ್ಕೆ ಸಂಪರ್ಕಿಸುವ ರಸ್ತೆ ಲೋಂಡಾ ಮತ್ತು ಸೂಪದ ಮುಖಾಂತರ	::	120.20
	ಒಟ್ಟು ರಾಜ್ಯ ಹೆದ್ದಾರಿಗಳ ಉದ್ದ		11288.00

ಹಾರಂಗಿ ಜಲಾಶಯದ ಕೆಳಭಾಗದಲ್ಲಿರುವ ಜನರಿಗೆ ಪುನರ್ವಸತಿ

9 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹಾರಂಗಿ ಜಲಾಶಯದ ಕೆಳಭಾಗದಲ್ಲಿ ಇರುವವರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ?*

ಆ) *ಹಾಗಿದ್ದಲ್ಲಿ ಇವರಿಗೆ ಯಾವಾಗ ಈ ಸೌಕರ್ಯವನ್ನು ಕಲ್ಪಿಸಲಾಗುವುದು?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಮತ್ತು ಆ) ಹಾರಂಗಿ ಜಲಾಶಯದ ಕೆಳಭಾಗದಲ್ಲಿ 194 ಕಾರ್ಮಿಕ ಕುಟುಂಬಗಳು ಅಲ್ಲಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಇವರುಗಳು ಜಲಾಶಯದ ಮುಳುಗಡೆ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಖಾಯಂ ಪುನರ್ವಸತಿ ಕಲ್ಪಿಸುವ ಪ್ರಸ್ತಾವೆ ಇರುವುದಿಲ್ಲ. ಆದರೂ ಸಹ, ಮಾನವೀಯತೆ ದೃಷ್ಟಿಯಿಂದ ಈ ಜನರಿಗೆ 20 ಅಡಿ X 30 ಅಡಿ ಅಳತೆಯ 194 ನಿವೇಶನಗಳನ್ನು ಗುತ್ತಿಗೆಯ ಆಧಾರದ ಮೇಲೆ ಹಾರಂಗಿ ಜಲಾಶಯದ ಕೆಳಭಾಗದ "ರಿಸ್ಟ್ರಿಕ್ಟೆಡ್ ಏರಿಯಾ" ದಲ್ಲಿ ನೀಡುವ ವಿಚಾರವು ಕಂದಾಯ ಇಲಾಖೆವತಿಯಿಂದ ಪರಿಶೀಲನೆಯಲ್ಲಿದೆ.

ದಾಬಸ್ಪೇಟೆ ಕೊರಟಗೆರೆ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್

167 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಾಬಸ್ಪೇಟೆ - ಕೊರಟಗೆರೆ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್ ಕಟ್ಟಲು ಲೋಕೋಪಯೋಗಿ ಸಚಿವರು ಕಳೆದ ವಿಧಾನ ಸಭೆಯ ಅಧಿವೇಶನದದಲ್ಲಿ ಆಶ್ವಾಸನೆ ಕೊಟ್ಟಿರುವುದು ನಿಜವೇ?*

ಆ) *ಹಾಗಿದ್ದಲ್ಲಿ, ಈ ಕೆಲಸ ತ್ವರಿತವಾಗಿ ಪ್ರಾರಂಭಿಸಲು ಸರ್ಕಾರ ಏನು ಕ್ರಮತೆಗೆದುಕೊಳ್ಳುವುದೇ?*

ಇ) *ಈ ಕೆಲಸ ಪೂರೈಸಲು ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು)

ಅ) ಪರಿಶೀಲಿಸಲಾಗುವುದು ಎಂದು ಉತ್ತರ ಕೊಡಲಾಗಿದೆ

ಆ) *ಈ ವಿಷಯದ ಬಗ್ಗೆ ರೈಲ್ವೆ ಇಲಾಖೆಯವರಿಂದ ರೇಖಾ ಅಂದಾಜನ್ನು ತಯಾರಿಸಲಾಗಿದೆ. ಈ ಅಂದಾಜು ಪರಿಶೀಲನೆಯಲ್ಲಿದೆ*

ಇ) *ವಿಧಿವಿಧಾನಗಳನ್ನು (ಫಾರ್ಮಾಲಿಟೀಸ್) ಪಾಲಿಸಿ, ಹಣ ಲಭ್ಯತೆಯ ಮೇರೆಗೆ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಈ ಕಾಮಗಾರಿಯನ್ನು ರೈಲ್ವೆ ಇಲಾಖೆಯವರು ನಿರ್ವಹಿಸಬೇಕಾಗಿರುವುದರಿಂದ ಕೆಲಸ ಪೂರೈಸಲು ಎಷ್ಟು ಕಾಲ ಬೇಕಾಗುತ್ತದೆ ಎಂಬುದನ್ನು ನಿಖರವಾಗಿ ತಿಳಿಸಲಾಗುವುದಿಲ್ಲ*